# ಮುಟ್ಟಿನ ರಜೆ ಬೇಕೆ? ಯಾಕೆ?

■ ಡಾ. ಪ್ರೇಮಲತ ಬಿ.

ಮುಟ್ಟಿನ ರಜೆಯ ಕುರಿತ ಚರ್ಚೆ ಕೊನೆಗೂ ತೀವ್ರತೆಯನ್ನು ಪಡೆದುಕೊಂಡಿದೆ. ಮುಟ್ಟಿನ ರಜೆ ನೀಡುವ ಪ್ರಸ್ತಾವನೆ ಕರ್ನಾಟಕ ಸರ್ಕಾರದ ಮುಂದಿದೆ. ವಿಶ್ವದ ಅನೇಕ ದೇಶಗಳು ಮಹಿಳೆಯರ ಋತುಸ್ರಾವದ ಕುರಿತು ಪೂರ್ವಗ್ರಹಗಳನ್ನು ತೊರೆಯುವತ್ತ ಮಾನವೀಯ ಹೆಜ್ಜೆಗಳನ್ನು ಇರಿಸಿವೆ; ಆ ದಿನಗಳನ್ನು ಸಮಾಧಾನದಿಂದ ಕಳೆಯುವಂತೆ ಉದ್ಯೋಗಸ್ಥ ಮಹಿಳೆಯರಿಗೆ ಸಂಬಳ ಸಹಿತ ರಜೆಯ ಸವಲತ್ತು ಒದಗಿಸಿವೆ. ಆದರೆ, ಮುಟ್ಟಿನ ರಜೆಯ ವಿಷಯ ಭಾರತದ ಬಹುತೇಕ ರಾಜ್ಯಗಳು ಸೇರಿದಂತೆ ವಿಶ್ವದ ಅನೇಕ ಭಾಗಗಳಲ್ಲಿ ಈಗಲೂ ‘ಬೇಕೆ? ಬೇಡವೆ?’ ಎನ್ನುವ ಪ್ರಾಥಮಿಕ ಚರ್ಚೆಯ ಹಂತದಲ್ಲಿ ಉಳಿದಿದೆ. ಮುಟ್ಟಿನ ರಜೆ ಅಗತ್ಯವನ್ನು ಹೇಳುತ್ತಲೇ, ಋತುಸ್ರಾವದ ಬಗ್ಗೆ ಅರಿವು ಮೂಡಿಸುತ್ತ, ಆ ಸಂದರ್ಭದಲ್ಲಿ ಹೆಣ್ಣು ಅನುಭವಿಸುವ ಸಂಕಟ ತಳಮಳಗಳ ಕುರಿತು ವಿಸ್ತೃತವಾಗಿ ಚರ್ಚಿಸುವ ಈ ಬರಹ, ಸಮಾಜ ಹಾಗೂ ಕಾನೂನು ಮತ್ತಷ್ಟು ಮಾನವೀಯಗೊಳ್ಳಬೇಕಾದ ಅಗತ್ಯವನ್ನು ಪ್ರತಿಪಾದಿಸುತ್ತಿದೆ.